ನಾನು ಭರವಸೆಯನ್ನು ಕೊಡುತ್ತೇನೆ. ಖಂಡಿತವಾಗಿ ನಾನು ಉತ್ತರವನ್ನು ತರಿಸುತ್ತೇನೆ. ನಿಮಗೆ ಮಾತ್ರವಲ್ಲ ನಮಗೂ ಕೂಡಾ ಮಾಹಿತಿಗಳು ಬೇಕಾಗಿವೆ. ಆದಕಾರಣ ಸ್ವಲ್ಪ ಕಾಲಾವಕಾಶವನ್ನು ನಾನು ಕೇಳುತ್ತೇನೆ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ) :– ಮಾನ್ಯ ಮುಖ್ಯಮಂತ್ರಿಗಳಿಗೆ ಗೌರವವನ್ನು ಕೊಡುತ್ತೇನೆ. ಒಂದು ವಿನಂತಿ. ಏಕೆಂದರೆ ಅಧಿವೇಶನ ಇರುವುದು ಕೇವಲ 30 ನೇ ತಾರೀಖಿನವರೆಗೆ ಹಾಗಾಗಿ ನನಗೆ ಉತ್ತರ ಯಾವಾಗ ಕೊಡುತ್ತಾರೆಂದು ಹೇಳಿದರೆ ಒಳ್ಳೆಯದು. ಟೈಮ್ ಬೇಕಾದರೆ ತೆಗೆದುಕೊಳ್ಳಲಿ ಏಕೆಂದರೆ ಇದು ರಾಜ್ಯದ ಹಿತದೃಷ್ಟಿಯಿಂದ ಕೇಳಿರುವಂತಹ ಪ್ರಶ್ನೆ.

ಅಧ್ಯಕ್ಷರು :– ನಿಮಗೆ ಉತ್ತರವನ್ನು ಕಳುಹಿಸಿಕೊಡಲಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ಇದಕ್ಕೆ ನಮಗೆ ಕನಿಷ್ಟ 2 ರಿಂದ 3 ವಾರಗಳ ಕಾಲಾವಕಾಶ ಬೇಕಾಗುತ್ತದೆ. ಆದಕಾರಣ ಉತ್ತರವನ್ನು ತಮಗೂ ಹಾಗೂ ಅವರಿಗೂ ಕಳುಹಿಸಿಕೊಡುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ವಾಸ ದೃಢೀಕರಣ ಪತ್ರವನ್ನು ಗ್ರಾಮ ಪಂಚಾಯಿತಿಗಳಲ್ಲಿ ನೀಡುವ ಕುರಿತು

28 : (131)

ಶ್ರೀ ಹಾಲಪ್ಪ ಹೆಚ್.

ಅ) ರಾಜ್ಯದಲ್ಲಿ ವಾಸ ದೃಡೀಕರಣ ಪತ್ರವನ್ನು ಯಾವ ಕಛೇರಿಯಲ್ಲಿ ನೀಡಲಾಗುತ್ತಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ನೀಡದೆ ತಹಶೀಲ್ದಾರರವರ ಕಛೇರಿಯಲ್ಲಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದರಿಂದಾಗಿ ವಾಸ ದೃಢೀಕರಣ ಪತ್ರವನ್ನು ಪಡೆಯಲು ಸಾರ್ವಜನಿಕರಿಗೆ ವಿಳಂಬವಾಗುತ್ತಿರುವುದರಿಂದ ತಹಶೀಲ್ದಾರ್ ಕಛೇರಿಯ ಬದಲು ಗ್ರಾಮ ಪಂಚಾಯಿತಿಯಲ್ಲಿ ನೀಡಲು ಇರುವ ಅಡೆ–ತಡೆಗಳೇನು?

ಈ) ಸರ್ಕಾರ ವಾಸ ದೃಢೀಕರಣ ಪತ್ರವನ್ನು ಗ್ರಾಮ ಪಂಚಾಯಿತಿಗಳಲ್ಲಿ ನೀಡಲು ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)

ಅ) ತಹಶೀಲ್ದಾರರ ಕಛೇರಿಯಿಂದ ನೆಮ್ಮದಿ ಕೇಂದ್ರಗಳ ಮುಖಾಂತರ ವಾಸ ಸ್ಥಳ ದೃಡೀಕರಣ ಪತ್ರವನ್ನು ನೀಡಲಾಗುತ್ತಿದೆ. ಅಲ್ಲದೇ ಸರ್ಕಾರಿ ಆದೇಶ

ಸಂಖ್ಯೆ ಆರ್.ಡಿ. 62 ಬಿಎಂಎಂ 2011 ದಿನಾಂಕ : 18.02.2012ರಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ 329 ನಾಡ ಕಛೇರಿಗಳ ವ್ಯಾಪ್ತಿಯಲ್ಲಿ ಬರುವಂತಹ ಪ್ರದೇಶಗಳಲ್ಲಿ ವಾಸ ಸ್ಥಳ ಪ್ರಮಾಣ ಪತ್ರವನ್ನು ನೀಡಲು ನಾಡ ಕಛೇರಿಗಳ ಉಪ ತಹಶೀಲ್ದಾರರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಆ) ಬಂದಿದೆ.

ಇ) ನಿಯಮಗಳಲ್ಲಿ ಅವಕಾಶವಿಲ್ಲ.

ಈ) ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ವಾಸವಿರುವ ಬಗ್ಗೆ ವರದಿಯನ್ನು ನೀಡಲು ಮಾತ್ರ ಅಧಿಕಾರವುಳ್ಳವರಾಗಿರುತ್ತಾರೆ.

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಇದು 3 ತಿಂಗಳ ಹಿಂದೆ ಇಲ್ಲಿ ದಿನಾಂಕವನ್ನು ಕೊಟ್ಟಿದ್ದಾರೆ. 18.02.2012 ಕ್ಕಿಂತ ಮೊದಲು ವಾಸ ದೃಢೀಕರಣ ಪತ್ರಗಳನ್ನು ಗ್ರಾಮ ಪಂಚಾಯತಿಗಳು ಕೊಡುತ್ತಿದ್ದವು. ಈಗ ಏಕಾಏಕಿ ಅದನ್ನು ಬದಲಾವಣೆ ಮಾಡಿ ಅದನ್ನು ತಾಲ್ಲೂಕು ಆಫೀಸಿನಲ್ಲಿ ತಹಶೀಲ್ದಾರರ ಹತ್ತಿರ ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರದ ಯಾವುದೇ ಸವಲತ್ತನ್ನು ತೆಗೆದುಕೊಳ್ಳಬೇಕಾದರೆ ವಾಸಸ್ಥಳ ದೃಢೀಕರಣ ಪತ್ರ ಬೇಕು. ಈಗ ಏನು ಮಾಡಿದ್ದಾರೆಂದರೆ ಗ್ರಾಮ ಪಂಚಾಯಿತಿಯಿಂದ ಮಾಹಿತಿಯನ್ನು ತೆಗೆದುಕೊಳ್ಳುತ್ತಾರೆ. ಅದನ್ನು ನೆಮ್ಮದಿ ಕೇಂದ್ರಕ್ಕೆ ಕೊಡಬೇಕು. ನೆಮ್ಮದಿ ಕೇಂದ್ರದಿಂದ ವಿ.ಎ.ಗೆ ಹೋಗಬೇಕು. ವಿ.ಎ. ಯಿಂದ ಆರ್.ಐ.ಗೆ ಹೋಗಬೇಕು. ಅಲ್ಲಿಂದ ತಹಶೀಲ್ದಾರ್ ಆಫೀಸಿಗೆ ಹೋಗಬೇಕು. ತಹಶೀಲ್ದಾರ್‌ರ ಆಫೀಸಿನಲ್ಲಿ ಮತ್ತೆ scrutiny ಮಾಡುತ್ತಾರೆ. ಅಲ್ಲಿಂದ ತಹಶೀಲ್ದಾರ್‌ರವರಿಗೆ ಹೋಗಬೇಕು. ಅಲ್ಲಿಂದ ಜನರಿಗೆ ಸಿಗಬೇಕು. ಇದೆಲ್ಲ ಏಕೆ? ಮೊದಲು ಇದ್ದದ್ದು ಏಕೆ ಬದಲಾವಣೆಯಾಯಿತು ಎನ್ನುವುದು ಗೊತ್ತಿಲ್ಲ. ಇವರು ಮಾಡಿರುವುದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ :– ಮಾನ್ಯ ಅಧ್ಯಕ್ಷರೆ, ಇದು ಗ್ರಾಮ ಪಂಚಾಯಿತಿಯಲ್ಲಿಯೇ ಕೊಡುವುದು ಒಳ್ಳೆಯದು. ಇಲ್ಲದಿದ್ದರೆ ಇದರಿಂದ ಬಹಳಷ್ಟು ತೊಂದರೆಯಾಗುತ್ತದೆ. ಪಾಸ್‌ಪೋರ್ಟ್‌ಗೆ ಸಂಬಂಧಪಟ್ಟ ಹಾಗೆ

ತಹಶೀಲ್ದಾರ್‌ರಿಂದಲೇ ತೆಗೆದುಕೊಳ್ಳಲಿ. ಬಾಕಿ ವಿಷಯಗಳಿಗೆ ಗ್ರಾಮ ಪಂಚಾಯಿತಿಯಲ್ಲಿಯೇ ಕೊಡುವುದು ತುಂಬಾ ಒಳ್ಳೆಯದು.

ಅಧ್ಯಕ್ಷರು :- ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಡಿ.ವಿ. ಸದಾನಂದಗೌಡ :- Karnataka Information Technology ರೂಲ್ಸ್ 2007 ರ ಪ್ರಕಾರ ಈ ಒಂದು ಕಾನೂನು ಬಂದಿದ್ದು, ಇದರಲ್ಲಿ 10ನೇ ಆಗಸ್ಟ್ 2007 ರಿಂದ ಜಾರಿಗೆ ಬಂದಿದೆ. ಇದರ ಪ್ರಕಾರ ಈ ನಿವಾಸಿ ದೃಢೀಕರಣವನ್ನು ತಹಶೀಲ್ದಾರರು ಕೊಡಬೇಕು. ಆದರೆ ತಹಶೀಲ್ದಾರರು ಕೊಡಬೇಕಾದರೆ, ಇದಕ್ಕೆ ಸಂಬಂಧಪಟ್ಟ ವಾಸಸ್ಥಳ ಸರ್ಟಿಫಿಕೇಟ್‌ಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ, ಪುರಸಭೆ, ಪಟ್ಟಣ ಪಂಚಾಯಿತಿ, ಅಥವಾ ನಗರಸಭೆ ಇವುಗಳ ವ್ಯಾಪ್ತಿಯಲ್ಲಿ ಮಾತ್ರ ನೀಡುವುದಕ್ಕೆ ಅಧಿಕಾರ ಇರುವುದು. ಈ ಸರ್ಟಿಫಿಕೇಟ್ issue ಮಾಡುವಂತಹದ್ದು ಕಾನೂನು ಪ್ರಕಾರ ತಹಶೀಲ್ದಾರರು ಮಾಡಬೇಕಾಗುತ್ತದೆ. ಅವರು ಹೇಳುವಂತಹದ್ದು ಸರಿಯಿದೆ. ನಾವು ಈಗಾಗಲೇ ಡಿಸೈಡ್ ಮಾಡಿದ್ದೇವೆ. ಇದನ್ನು ಸ್ವಲ್ಪ ಸರಳೀಕರಣಗೊಳಿಸಬೇಕು, ನೆಮ್ಮದಿ ಕೇಂದ್ರಗಳ ಮುಖಾಂತರ ಇದನ್ನು ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು. ಎಲ್ಲಾ ಕಡೆಯಿಂದ ವರದಿ ತರಿಸಿಕೊಂಡು ಕೊಡುವಲ್ಲಿ ಡಿಲೇ ಆಗುತ್ತಿದೆ. ಆದಕಾರಣ ಸಾರ್ವಜನಿಕರಿಗೆ ಅಗತ್ಯವಾದ ಸೇವೆಯನ್ನು ನೀಡುವ ಅಧಿಕಾರವನ್ನು ವಿಕೇಂದ್ರಿಕರಣಗೊಳಿಸುವುದು ಮತ್ತು ನಾಡ ಕಛೇರಿಯ ಉಪ ತಹಶೀಲ್ದಾರರಿಗೆ ಈ ಸೇವೆಯನ್ನು ಕೊಡುವಂತಹದು, ಇದರ ಮುಖಾಂತರ ಈಗಾಗಲೇ ಇದನ್ನು decentralize ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಈಗಾಗಲೇ ಇದಕ್ಕೆ ಒಂದು ಹೊಸ ಪ್ರಪೋಸಲ್ ಅನ್ನು ತಂದಿದ್ದೇವೆ. ಹಾಲಪ್ಪನವರು ಹೇಳಿದ ರೀತಿಯಲ್ಲಿ ಇದು ಬಹಳ ತೊಂದರೆಯಾಗುತ್ತಿರುವುದನ್ನು ನಾವೆಲ್ಲಾ ಗಮನಿಸಿದ್ದೇವೆ. ಇದನ್ನು immediate ಆಗಿ rectify ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿ, ಹೊಸ ಸೂಚನೆಗಳ ಮುಖಾಂತರ ತಕ್ಷಣ ಕೆಳಗಿನ ಹಂತದಲ್ಲಿ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ಹೆಚ್. ಹಾಲಪ್ಪ :- ಎಲ್ಲಾ ನೆಮ್ಮದಿ ಕೇಂದ್ರಗಳಲ್ಲಿ ಉಪ-ತಹಶೀಲ್ದಾರರುಗಳಿಲ್ಲ. ಡೆಪ್ಯೂಟಿ ತಹಶೀಲ್ದಾರರು ಇರುವುದು ಒಂದು ತಾಲ್ಲೂಕಿನಲ್ಲಿ ಬರೀ 1 ಅಥವಾ 2 ಹೋಬಳಿಗೆ ಮಾತ್ರ ಇದ್ದಾರೆ. ಎಲ್ಲಾ ಹೋಬಳಿಗಳಲ್ಲಿಯೂ ಉಪ-ತಹಶೀಲ್ದಾರರುಗಳಿಲ್ಲ. ಆದ್ದರಿಂದ ನೆಮ್ಮದಿ ಕೇಂದ್ರಗಳಿಗೆ ಕೊಟ್ಟರೆ ಮತ್ತೆ ತೊಂದರೆಯಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :- ನಮ್ಮ ಪ್ರಪೋಸಲ್ ಈಗಾಗಲೇ ರೆವಿನ್ಯೂ ಡಿಪಾರ್ಟ್‌ಮೆಂಟ್ ಮುಂದಿದೆ. ನೆಮ್ಮದಿ ಕೇಂದ್ರಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ವಿಸ್ತರಿಸಬೇಕೆಂದು ಈಗಾಗಲೇ ತೀರ್ಮಾನಗಳನ್ನು ತೆಗೆದುಕೊಂಡು ಪ್ರಕ್ರಿಯೆಗಳಿಗೆ ಚಾಲನೆಯನ್ನು ಕೊಡುತ್ತಿದ್ದೇವೆ. ಈ ನೆಮ್ಮದಿ ಕೇಂದ್ರ ಗ್ರಾಮ ಪಂಚಾಯಿತಿಗೆ ಬಂದರೆ ಆ ಗ್ರಾಮ ಪಂಚಾಯಿತಿಯ ಮುಖಾಂತರವೇ ಈ ಸರ್ಟಿಫಿಕೇಟ್‌ಗಳನ್ನು issue ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುವುದು process ನಲ್ಲಿದೆ. ಜನರ ಬೇಡಿಕೆಗಳ ಪ್ರಕಾರ ಅದನ್ನು ಮಾಡುತ್ತೇವೆ.

ಅಧ್ಯಕ್ಷರು :- ಶ್ರೀ ಕೆ.ಎಂ. ಶಿವಲಿಂಗೇಗೌಡ

ನೆರೆಹಾವಳಿಯ ನಿವಾರಣೆಗಾಗಿ ಸರ್ಕಾರದ ಕ್ರಮ

29 (136)

ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಮಹಾಪರದಿಂದಾಗಿ ನೆರೆ ಹಾವಳಿಯಿಂದ ನಷ್ಟ ಹೊಂದಿದ ತಾಲ್ಲೂಕುಗಳಾವುವು (ಮಾಹಿತಿ ನೀಡುವುದು)

ಆ) ನೆರೆ ಹಾವಳಿಯ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು (ವರ್ಷವಾರು ಮಾಹಿತಿ ನೀಡುವುದು);

ಇ) ಕೇಂದ್ರ ಸರ್ಕಾರದಿಂದ ನೆರೆ ಹಾವಳಿಯ ನಿವಾರಣೆಗೆ ನೀಡಿದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು; ಖರ್ಚಾಗದೆ ಉಳಿದ ಹಣವೆಷ್ಟು; ಖರ್ಚಾಗದಿರಲು ಕಾರಣವೇನು (ವರ್ಷವಾರು ಮಾಹಿತಿ ನೀಡುವುದು);

ಈ) ಕಳೆದ 3 ವರ್ಷಗಳಿಂದ ನೆರೆ ಹಾವಳಿ ನಿವಾರಣೆಗೆ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು; ಖರ್ಚಾದ ಹಣವೆಷ್ಟು; ಖರ್ಚಾಗದೆ ಉಳಿದ ಹಣವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಪದೇ ಪದೇ ಗ್ರಾಮಗಳು ನೆರೆ ಹಾವಳಿಗೆ ತುತ್ತಾಗುವುದನ್ನು ಶಾಶ್ವತವಾಗಿ ತಪ್ಪಿಸುವ ಸಲುವಾಗಿ ಸರ್ಕಾರವು ಪ್ರವಾಹಕ್ಕೆ ಒಳಗಾಗುವ ಒಟ್ಟು 14 ಜಿಲ್ಲೆಯ 289 ಗ್ರಾಮಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಂಡಿದೆ. ಇದರಲ್ಲಿ ಈಗಾಗಲೇ 151 ಗ್ರಾಮಗಳನ್ನು ಸ್ಥಳಾಂತರಿಸಲಾಗಿದೆ. 57,389 ಮನೆಗಳ ನಿರ್ಮಾಣ ಮಾಡಬೇಕಾಗಿದ್ದು, ಇದರಲ್ಲಿ 56,377 ಮನೆಗಳ ನಿರ್ಮಾಣ